ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಗೊಳಿಸುವುದು

1710 - ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ಸಹಾಯಧನ ಮೊತ್ತ ಎಷ್ಟು?

ಆ) ಇವರುಗಳ ಸಹಾಯಧನ ಹೆಚ್ಚಿಸುವ ಬಗ್ಗೆ ಸರ್ಕಾರದ ನಿಲುವೇನು?

ಇ) ಇವರುಗಳನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀಮತಿ ವಿಮಲಾಬಾಯಿ ಜಗದೇವ್‌ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಭಾರತ ಸರ್ಕಾರದ ಮಾರ್ಗ ಸೂಚಿಗಳಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ನೀಡಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಲಾಗುತ್ತಿರುವ ಗೌರವಧನ ಈ ಕೆಳಕಂಡಂತಿದೆ.

	ಅಂಗನವಾಡಿ ಕಾರ್ಯಕರ್ತೆಯರು	*ರೂ.*
1.	ಎಸ್.ಎಸ್.ಎಲ್.ಸಿ. ನಪಾಸಾದವರಿಗೆ	438.00
2.	ಎಸ್.ಎಸ್.ಎಲ್.ಸಿ. ನಪಾಸಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ	469.00
3.	ಎಸ್.ಎಸ್.ಎಲ್.ಸಿ. ನಪಾಸಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ	500.00
4.	ಎಸ್.ಎಸ್.ಎಲ್.ಸಿ. ಪಾಸಾದವರಿಗೆ	500.00
5.	ಎಸ್.ಎಸ್.ಎಲ್.ಸಿ. ಪಾಸಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ	531.00
6.	ಎಸ್.ಎಸ್.ಎಲ್.ಸಿ. ಪಾಸಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ	563.00

ಆ) ಭಾರತ ಸರ್ಕಾರವು ದಿನಾಂಕ 16.5.1997ರಿಂದ ಜಾರಿಗೆ ಬರುವ ಹಾಗೆ ಶೇಕಡ 25ರಷ್ಟು ಹೆಚ್ಚುವರಿ ಗೌರವಧನವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ಮಂಜೂರು ಮಾಡಿದೆ. ರಾಜ್ಯ ಸರ್ಕಾರವು ಸಹಾ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ.100.00ಗಳಂತೆ ಹೆಚ್ಚುವರಿಯಾಗಿ ಗೌರವಧನವನ್ನು ನವೆಂಬರ್ 95ರಿಂದ ರಾಜ್ಯ ಸರ್ಕಾರದ ನಿಧಿಯಿಂದ ಮಂಜೂರು ಮಾಡಿದೆ.

ಇ) ದಿನಾಂಕ 9.8.1996ರ ಆದೇಶದಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಲಿಯು ರಾಜ್ಯ ಸರ್ಕಾರಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಸೇವೆಯನ್ನು ಕ್ರಮ ಬದ್ಧಗೊಳಿಸಲು ಆದೇಶ ನೀಡಿರುತ್ತದೆ. ಭಾರತ ಸರ್ಕಾರದ ಸೂಚನೆಯಂತೆ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿಯನ್ನು ದಾಖಲು ಮಾಡಲಾಗಿದೆ. ಸರ್ವೋಚ್ಚನ್ಯಾಯಾಲಯದ ಆದೇಶವನ್ನು ನಿರೀಕ್ಷಿಸಲಾಗಿದೆ. ನ್ಯಾಯಾಲಯದ ತೀರ್ಪು ಬಂದ ನಂತರ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹೊಸಪೇಟೆ ತಾಲ್ಲೂಕಿನ ಕೊಳಚೆ ಪ್ರದೇಶಗಳು

1712 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಸಪೇಟೆ ತಾಲ್ಲೂಕಿನಲ್ಲಿ ಘೋಷಿತ ಕೊಳಚೆ ಪ್ರದೇಶಗಳೆಷ್ಟು? ಯಾವುವು?*

ಆ) *ಪ್ರತಿ ಕೊಳಚೆ ಪ್ರದೇಶಗಳಿಗೆ ನಿರ್ದಿಷ್ಟವಾಗಿ ನಿಗಧಿಪಡಿಸಿದ ಹಣವೆಷ್ಟು? ಯಾವ ಅಭಿವೃದ್ಧಿ ಕೆಲಸಗಳಿಗಾಗಿ?*

ಇ) *ಹೊಸದಾಗಿ ಘೋಷಿಸಲು ಉದ್ದೇಶಿಸಿರುವ ಕೊಳಚೆ ಪ್ರದೇಶಗಳೆಷ್ಟು? ಯಾವುವು?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಹೊಸಪೇಟೆ ತಾಲ್ಲೂಕಿನಲ್ಲಿ ಘೋಷಿತ ಒಟ್ಟು 38 ಕೊಳಚೆ ಪ್ರದೇಶಗಳದ್ದು ವಿವರ ಕೆಳಗಿನಂತಿದೆ.

ಕಮಲಾಪುರ ಪಟ್ಟಣ	-	8
ಅಮರಾವತಿ ಪಟ್ಟಣ	-	2
ಕಂಪ್ಲಿ ಪಟ್ಟಣ	-	3
ಹೊಸಪೇಟೆ ನಗರ	-	25

(ವಿವರಗಳನ್ನು ಅನುಬಂಧ - 1ರಲ್ಲಿ ಒದಗಿಸಿದೆ)

ಆ) ರಾಜ್ಯ ಸರ್ಕಾರವು ಪ್ರತಿ ಸಾಲಿನ ಆಯವ್ಯಯದಲ್ಲಿ ಮಂಡಳಿಗೆ ನಿಗಧಿಪಡಿಸಲಿರುವ ಅನುದಾನ ಆಧರಿಸಿ ಕೊಳಚೆ ಪ್ರದೇಶಗಳ ಸಂಖ್ಯೆ, ಜನಸಂಖ್ಯೆ ಹಾಗೂ ಹಣದ ಲಭ್ಯತೆ ಆಧಾರದ ಮೇಲೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಹಂತ ಹಂತವಾಗಿ ಕೊಳಚೆಗೇರಿಗಳ ಅಭಿವೃದ್ಧಿಗಾಗಿ ಹಣವನ್ನು ನಿಗಧಿಪಡಿಸಲಾಗುವುದು.

ಇ) ಹೊಸಪೇಟೆ ನಗರದಲ್ಲಿ 9 ಮತ್ತು ಕಮಲಾಪುರ ಪಟ್ಟಣದಲ್ಲಿ 9 ಕೊಳಚೆ ಪ್ರದೇಶಗಳನ್ನು ಹೊಸದಾಗಿ ಗುರುತಿಸಿದ್ದು, ಈ 18 ಕೊಳಚೆ ಪ್ರದೇಶಗಳನ್ನು ಕಾಯಿದೆ ಅಡಿಯಲ್ಲಿ ಘೋಷಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

(ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ).